ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 01-12-1971

*<u>ಸರ್ವಶಕ್ತಿಗಳ ಸಂಪತ್ತಿವಂತರಾಗಿ</u>* (सर्व-शक्तियों के सम्पत्तिवान बनो)

ವಿದೇಹಿ, ವಿದೇಶಿ ಬಾಪ್‌ದಾದಾರವರಿಗೆ ಮಕ್ಕಳಸಮಾನ ದೇಹದ ಆಧಾರವನ್ನು ಪಡೆದು ಎಂತಹ ದೇಶವೋ ಅಂತಹ ವೇಷವನ್ನು ಧಾರಣೆ ಮಾಡಿಕೊಳ್ಳಬೇಕಾಗುತ್ತದೆ. ವಿದೇಹಿ ತಂದೆಯನ್ನೂ ಸಹ ಸ್ನೇಹಿ ಶ್ರೇಷ್ಠಾತ್ಮರು ತಮ್ಮ ಸ್ನೇಹದಿಂದ ತಮ್ಮಂತೆಯೇ ಮಾಡಿಕೊಳ್ಳುವ ನಿಮಂತ್ರಣ ನೀಡುತ್ತೀರಿ ಮತ್ತೆ ತಂದೆಯೂ ಸಹ ಮಕ್ಕಳ ನಿಮಂತ್ರಣವನ್ನು ಸ್ವೀಕಾರ ಮಾಡಿ ಮಿಲನ ಮಾಡುವುದಕ್ಕಾಗಿ ಬರುತ್ತಾರೆ. ಇಂದು ತಂದೆಯೂ ಸಹ ಮಕ್ಕಳಿಗೆ ನಿಮಂತ್ರಣ ಕೊಡಲು ಬಂದಿದ್ದಾರೆ. ಯಾವ ನಿಮಂತ್ರಣ ತಿಳಿದಿದೆಯೇ? ಈಗ ಮನೆಗೆ ಹೋಗುವುದಕ್ಕಾಗಿ ಪೂರ್ಣ ತಯಾರಿ ಮಾಡಿಕೊಂಡಿದ್ದೀರಾ ಅಥವಾ ಇನ್ನೂ ಮಾಡಿಕೊಳ್ಳಬೇಕೇ? ಈಗ ತಯಾರು ಮಾಡಿಕೊಳ್ಳುತ್ತೀರಾ? ತಯಾರಿ ಮಾಡಿಕೊಳ್ಳುವುದರಲ್ಲಿ ಎಷ್ಟು ಸಮಯ ಹಿಡಿಯುತ್ತದೆ? ಈ ಹೊಸ ಹೂಗುಚ್ಛವು ವಿಶೇಷ ನವೀನತೆಯನ್ನು ತೋರಿಸಬೇಕು. ನಾವು ಹೊಸಬರು, ಏನು ಮಾಡಬಲ್ಲೆವು ಎಂದು ತಿಳಿದುಕೊಳ್ಳುವುದಿಲ್ಲ ತಾನೆ. ಸದಾ ಸ್ಮೃತಿಯಲ್ಲಿಟ್ಟುಕೊಳ್ಳಿರಿ - ಈ ಪುರುಷೋತ್ತಮ ಶ್ರೇಷ್ಠ ಸಂಗಮಯುಗದ ಸಮಯವು ಕಡಿಮೆಯಾಗುತ್ತಾ ಹೋಗುತ್ತದೆ. ಈ ಸ್ವಲ್ಪ ಸಂಗಮದ ಸಮಯಕ್ಕೆ ವರದಾತನ ಮೂಲಕ ವರದಾನವು ಸಿಕ್ಕಿದೆ- ಯಾವುದೇ ಆತ್ಮನು ತನ್ನ ತೀವ್ರಪುರುಷಾರ್ಥದಿಂದ ವರದಾತನಿಂದ ಎಷ್ಟು ವರದಾನಗಳನ್ನು ಪಡೆಯಬೇಕೋ ಪಡೆಯಬಲ್ಲಿರಿ ಆದ್ದರಿಂದ ಯಾವ ಹೊಸ-ಹೊಸ ಹೂಗುಚ್ಛಗಳು ಸಮ್ಮುಖದಲ್ಲಿ ಕುಳಿತಿದ್ದೀರಿ, ಸಮ್ಮುಖದಲ್ಲಿ ಬಂದಿರುವ ಈ ಹೂಗುಚ್ಛವು ಏನು ಬೇಕೋ, ಹೇಗೆ ಬೇಕೋ, ಎಷ್ಟು ಸಮಯದಲ್ಲಿ ಬೇಕೋ ವರದಾತ ತಂದೆಯಿಂದ ವರದಾನದ ರೂಪದಲ್ಲಿ ಆಸ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳಬಹುದು ಆದ್ದರಿಂದ ವಿಶೇಷವಾಗಿ ಬಾಪ್‌ದಾದಾರವರಿಂದ ಈ ಹೊಸ ಹೂಗುಚ್ಛದ ಮೇಲೆ, ಸ್ನೇಹೀ ಆತ್ಮರ ಮೇಲೆ ವಿಶೇಷ ಸ್ನೇಹ ಮತ್ತು ಸಹಯೋಗವಿದೆ. ತಂದೆಯ ಈ ಸಹಯೋಗವನ್ನು ಸಹಜಯೋಗದ ರೂಪದಲ್ಲಿ ಧಾರಣೆ ಮಾಡಿಕೊಳ್ಳುತ್ತಾ ಹೋಗಿ ಈ ವರದಾನವು ಸ್ವಲ್ಪ ಸಮಯದಲ್ಲಿಯೇ ಹೈಜಂಪ್ ಮಾಡಿಸುತ್ತದೆ. ಕೇವಲ ಸದಾ ಇದೇ ಸ್ಮೃತಿಯನ್ನಿಟ್ಟುಕೊಳ್ಳಿ- ನಾನಾತ್ಮನಿಗೆ ಈ ಡ್ರಾಮಾದಲ್ಲಿ ವಿಶೇಷ ಪಾತ್ರವಿದೆ, ಯಾವುದು? ಸರ್ವಶಕ್ತಿವಂತ ತಂದೆಯು ಸಹಯೋಗಿದ್ದಾರೆ. ಯಾರಿಗೆ ಸರ್ವಶಕ್ತಿವಂತನೇ ಸಹಯೋಗಿಯಾಗಿದ್ದಾರೆಯೋ ಅವರು ಹೈಜಂಪ್ ಮಾಡಲು ಸಾಧ್ಯವಿಲ್ಲವೇ? ಸಹಯೋಗವನ್ನು ಸಹಜಯೋಗವನ್ನಾಗಿ ಮಾಡಿಕೊಳ್ಳಿ. ಯೋಗ್ಯ ತಂದೆಗೆ ಸಹಯೋಗಿಯಾಗುವುದೇ ಯೋಗಯುಕ್ತ ಸ್ಥಿತಿಯಾಗಿದೆಯಲ್ಲವೆ? ಯಾರು ನಿರಂತರ ಯೋಗಿಯಾಗಿರುವರೋ ಅವರ ಪ್ರತೀ ಸಂಕಲ್ಪ, ಶಬ್ದ ಮತ್ತು ಕರ್ಮ ತಂದೆ ಮತ್ತು ತನ್ನ ರಾಜ್ಯದ ಸ್ಥಾಪನೆಯ ಕರ್ತವ್ಯದಲ್ಲಿ ಸದಾ ಸಹಯೋಗಿಯಾಗಿರುವುದೇ ಕಂಡುಬರುವುದು ಇಂತಹವರಿಗೆ ಜ್ಞಾನಿಆತ್ಮ, ಯೋಗಿ ಆತ್ಮ ಮತ್ತು ಸತ್ಯಸೇವಾಧಾರಿಯೆಂದು ಹೇಳಲಾಗುತ್ತದೆ. ಸದಾ ಸಹಯೋಗಿಯಾಗುವುದೇ ಸಹಜಯೋಗವಾಗಿದೆ. ಒಂದುವೇಳೆ ಬುದ್ಧಿಯ ಮೂಲಕ ಸದಾ ಸಹಯೋಗಿಯಾಗುವುದರಲ್ಲಿ ಕಾರಣ, ಅಕಾರಣದಿಂದ ಕಷ್ಟದ ಅನುಭವವಾಗುತ್ತದೆಯೆಂದರೆ ವಾಚಾ ಹಾಗೂ ಕರ್ಮದ ಮುಖಾಂತರವೂ ತಮ್ಮನ್ನು ಸಹಯೋಗಿಯಾಗಿ ಮಾಡಿಕೊಂಡರೂ ಸಹ ತಾವು ಯೋಗಿಗಳಾಗಿದ್ದೀರಿ. ಈ ರೀತಿ ನಿರಂತರ ಯೋಗಿಯಂತೂ ಆಗಬಹುದಲ್ಲವೆ. ಇದೂ ಕಷ್ಟವಾಗುತ್ತದೆಯೇ? ಮನಸ್ಸಿನಿಂದ ಆಗದಿದ್ದರೆ ತನುವಿನಿಂದ, ತನುವಿನಿಂದ ಆಗದಿದ್ದರೆ ಧನದಿಂದ, ಧನದಿಂದಲೂ ಆಗದಿದ್ದರೆ ಯಾರು ಯಾವುದರಲ್ಲಿ ಸಹಯೋಗಿಯಾಗಲು ಸಾಧ್ಯವಿದೆಯೋ ಅದರಲ್ಲಿ ಅವರು ಸಹಯೋಗಿಯಾಗುವುದೂ ಒಂದು ಯೋಗವೇ.

ಒಂದಾಗಿದೆ ತಮ್ಮಲ್ಲಿನ ಸಾಹಸದಿಂದ ಸಹಯೋಗಿಯನ್ನಾಗಿ ಮಾಡುವುದು. ಒಂದುವೇಳೆ ಸಾಹಸವಿಲ್ಲದಿದ್ದರೆ ತನುವಿನಲ್ಲಿಯೂ, ಮನಸ್ಸಿನಲ್ಲಿಯೂ, ಧನದಲ್ಲಿಯೂ ಸಾಹಸವಿಲ್ಲವೆಂದರೆ ಏನು ಮಾಡುವುದು? ಇಂತಹವರೂ ಸಹ ಸದಾ ಯೋಗಿಯಾಗಬಹುದು. ಕೆಲವರು ಈ ರೀತಿಯೂ ಇರುತ್ತಾರೆ. ಭಲೆ ತಮ್ಮ ಸಾಹಸವಿರುವುದಿಲ್ಲ ಆದರೆ ಉಮ್ಮಂಗ-ಉಲ್ಲಾಸವಿರುತ್ತದೆ.

ಹಣದ ಶಕ್ತಿಯೂ ಇರುವುದಿಲ್ಲ. ಮನಸ್ಸಿನಲ್ಲಿ ಕಂಟ್ರೋಲಿಂಗ್ ಫವರ್ ಇರುವುದಿಲ್ಲ, ಹೆಚ್ಚು ವ್ಯರ್ಥಸಂಕಲ್ಪಗಳು ನಡೆಯುತ್ತವೆ ಆದರೆ ನಿಮ್ಮ ಯಾವುದೇ ಮಾತು ಜೀವನದ ಅನುಭವದಲ್ಲಿ ಉಲ್ಲಾಸ ಮತ್ತು ಉಮ್ಮಂಗವನ್ನು (ಉತ್ಸಾಹ) ತರಿಸುವಂತದ್ದಾಗಿದ್ದರೆ ಅದರ ಮುಖಾಂತರವೇ ಅನ್ಯರಿಗೂ ಉಮ್ಮಂಗ ತರಿಸಿ, ಆಗ ಅನ್ಯರಿಗೆ ಸಾಹಸ ಬರುವುದರಿಂದ ತಮಗೂ ಅದರಲ್ಲಿ ಪಾಲು ಸಿಗುವುದು. ಇಷ್ಟಂತೂ ಅವಶ್ಯವಾಗಿದೆ. ಯಾರೆಲ್ಲಾ ಆತ್ಮರು ಆದಿಯಿಂದ ಹಾಗೂ ಈಗ ಬಂದಿದ್ದಾರೆಯೋ ಆ ಪ್ರತಿಯೊಂದು ಆತ್ಮನಿಗೆ ತಮ್ಮ ಜೀವನದಲ್ಲಿ ಯಾವುದಾದರೂ ಪ್ರಾಪ್ತಿಯ ಅನುಭವ ಅವಶ್ಯವಾಗಿ ಆಗಿದೆ ಆದ್ದರಿಂದಲೇ ಬಂದಿದ್ದಾರೆ. ಇದೇ ವಿಶೇಷ ಅನುಭವವನ್ನು ಅನೇಕ ಆತ್ಮರಿಗೆ ಉಲ್ಲಾಸ ಮತ್ತು ಉತ್ಸಾಹವನ್ನು ಹೆಚ್ಚಿಸುವ ಕೆಲಸದಲ್ಲಿ ತೊಡಗಿಸಬಲ್ಲಿರಿ. ಈ ಧನದಿಂದ ಯಾರೂ ವಂಚಿತರಾಗಿಲ್ಲ.ಯಾವುದು ತಮ್ಮ ಬಳಿ ಇದೆಯೋ, ಎಷ್ಟಿದೆಯೋ ಅದರಮೂಲಕವೇ ಅನ್ಯರನ್ನು ಸಾಹಸವಂತರನ್ನಾಗಿ ಮಾಡುವುದು ಹಾಗೂ ಸಹಯೋಗಿಯನ್ನಾಗಿ ಮಾಡುವುದೂ ಸಹ ತಮ್ಮ ಸಹಯೋಗದ ಸಬ್ಜೆಕ್ಟಿನಲ್ಲಿ ಅಂಕಗಳು ಜಮಾ ಆಗುವುದು. ಈಗ ಹೇಳಿ, ಯೋಗವು ಸಹಜವೋ, ಅಥವಾ ಕಷ್ಟವೋ? ನಿರಂತರ ಯೋಗಿಗಳಾಗುವುದು ಕಷ್ಟವೇ? ಯಾರು ತಂದೆಯ ಮಕ್ಕಳಾಗಿಬಿಟ್ಟಿದ್ದೀರಿ, ಅವರಿಗೆ ಇದರಲ್ಲಂತೂ ಪರ್ಸೆಂಟೇಜ್ ಇಲ್ಲ ಅಲ್ಲವೆ. ಇದರಲ್ಲಂತೂ ಫುಲ್ ಪಾಸ್ ಆಗಿದ್ದೀರಲ್ಲವೆ! ಇರುವುದೇ ಒಬ್ಬ ತಂದೆ ಅಂದಮೇಲೆ ಇನ್ನೇನು ಇದೆ? ತಂದೆ ಮತ್ತು ತಾವು. ಅಷ್ಟೇ, ಮೂರನೆಯವರು ಯಾರೂ ಇಲ್ಲ. ತಂದೆಯಲ್ಲಿ ಆಸ್ತಿಯಂತೂ ಇದ್ದೇ ಇದೆ. ಮೂರನೆಯದೇನಿದೆ? ತಂದೆ ಮತ್ತು ತಾವು ಅರ್ಥಾತ್ ಆತ್ಮ(ಶರೀರವಲ್ಲ). ತಂದೆ ಮತ್ತು ತಾವೇ ಉಳಿದುಕೊಂಡಮೇಲೆ ಇಬ್ಬರ ಮಿಲನದಲ್ಲಿ ಮೂರನೆಯ ಅಡಚಣೆಯೇ ಇಲ್ಲ ಅಂದಮೇಲೆ ನಿರಂತರ ಯೋಗಿಗಳಾದರಲ್ಲವೆ. ಮೂರನೆಯವರೇ ಇಲ್ಲವೆಂದಮೇಲೆ ಅಡಚಣೆಯು ಬರುವುದಾದರೂ ಎಲ್ಲಿಂದ? ನಂತರ ಬಂದುಬಿಡುತ್ತದೆ, ಬಂದುಬಿಡುತ್ತದೆ, ಏನು ಮಾಡುವುದು ಎಂದು ಹೇಳುವುದಿಲ್ಲ ತಾನೆ? ಈಗ ಈ ಭಾಷೆಯು ಸಮಾಪ್ತಿ. ಸದಾ ಇದನ್ನೇ ಆಲೋಚಿಸಿ - ನಾವು ಸದಾ ತಂದೆಯ ಸಹಯೋಗಿಗಳು ಅರ್ಥಾತ್ ಸಹಜಯೋಗಿಗಳಾಗಿದ್ದೇವೆ. ವಿಯೋಗವೇನೆಂಬುದೇ ಗೊತ್ತಿಲ್ಲ. ಹೇಗೆ ಭವಿಷ್ಯದಲ್ಲಿ ಮಾಯೆಯೆಂದರೇನು ಎಂಬುದೇ ತಿಳಿದುಬರುವುದಿಲ್ಲ. ಅದೇರೀತಿ ಈಗಿನ ಸ್ಥಿತಿಯಿರಲಿ. ಈಗ ಈ ಬಾಲ್ಯದ ಮಾತುಗಳು ಕಳೆದುಹೋಯಿತು. ಈಗಂತೂ ಸಮೀಪ ಬಂದಿದ್ದೀರಿ. ಹೇಗೆ ತಂದೆಯ ಮಕ್ಕಳಾಗಿದ್ದೀರಿ. ಅದರಲ್ಲಿ ಯಾವುದೇ ಪರ್ಸಂಟೇಜ್ ಇಲ್ಲ. ಹಾಗೆಯೇ ನಿರಂತರ ಸಹಜಯೋಗಿ ಹಾಗೂ ಯೋಗಿಯಾಗುವ ಸ್ಟೇಜ್‌ನಲ್ಲಿಯೂ ಈಗ ಪರ್ಸೆಂಟೇಜ್ ಸಮಾಪ್ತಿಯಾಗ ಬೇಕು. ನ್ಯಾಚುರಲ್ ಮತ್ತು ನೇಚರ್ ಆಗಿಬಿಡಲಿ, ಹೇಗೆ ಯಾರದೇ ವಿಶೇಷ ನೇಚರ್ ಇದ್ದರೆ ಆ ನೇಚರ್‌ನ ವಶವಾಗಿ ಬಯಸದಿದ್ದರೂ ಅದರಂತೆಯೇ ನಡೆಯುತ್ತಿರುತ್ತಾರೆ. ಇದು ನನ್ನ ನೇಚರ್ ಎಂದು ಹೇಳುತ್ತಾರಲ್ಲವೆ. ಏನು ಮಾಡಲಿ, ನನಗೆ ಇಷ್ಟವಿಲ್ಲ ಆದರೆ ಇದು ನನ್ನ ನೇಚರ್ ಎಂದು ಹೇಳುತ್ತಾರೆ. ಹಾಗೆಯೇ ನಿರಂತರ ಸಹಜಯೋಗಿ ಅಥವಾ ಸಹಯೋಗಿಯ ನೇಚರ್ ಆಗಿಬಿಡಲಿ, ನ್ಯಾಚುರಲ್ ಆಗಿಬಿಡಲಿ, ಏನು ಮಾಡಲಿ, ಹೇಗೆ ಯೋಗ ಮಾಡಲಿ- ಈ ಮಾತುಗಳೆಲ್ಲವೂ ಸಮಾಪ್ತಿ. ಸದಾ ಸಹಯೋಗಿ ಅರ್ಥಾತ್ ಯೋಗಿಗಳು ಆಗಿಯೇ ಇದ್ದೀರಿ. ಇದೇ ಒಂದುಮಾತನ್ನು ನೇಚರ್ ಮತ್ತು ನ್ಯಾಚುರಲ್ ಮಾಡಿಕೊಂಡಾಗಲೂ ಎಲ್ಲಾ ಸಬ್ಜೆಕ್ಟ್ ಪರ್‌ಫೆಕ್ಟ್ ಆಗಿಬಿಡುತ್ತದೆ. ಪರ್‌ಫೆಕ್ಟ್(ಪರಿಪೂರ್ಣ) ಎಂದರೆ ಎಫೆಕ್ಟನಿಂದ(ಪರಿಣಾಮ) ದೂರ, ಡಿಫೆಕ್ಟನಿಂದಲೂ(ಕೊರತೆ) ದೂರವಾಗುತ್ತೀರಿ ಅಂದಮೇಲೆ ಇಂದಿನಿಂದ ಎಲ್ಲರೂ ನಿರಂತರ ಸಹಜಯೋಗಿಗಳಾದ್ದೀರಾ ಅಥವಾ ಈಗ ಆಗುತ್ತೀರಾ? ವರದಾತ ತಂದೆಯು ಆಸ್ತಿಯ ಜೊತೆ ವರದಾನವನ್ನೂ ಕೊಡುತ್ತಾರೆ, ಅಂದಮೇಲೆ ಯಾರಿಗೆ ಆಸ್ತಿಯ ಅಧಿಕಾರವೂ ಇದೆ, ವರದಾನವೂ ಪ್ರಾಪ್ತಿಯಾಗಿದೆ. ಅವರಿಗೆ ಕಷ್ಟವೇ? ಇನ್ನುಮುಂದೆ ನೋಡುವೆವು- ಯಾರಾದರೂ ಬಂದು ಕಷ್ಟವೆಂದು ಹೇಳಿದರೆ ಅವರಿಗೆ ಆಸ್ತಿ ಮತ್ತು ವರದಾನವೆಂದು ನೆನಪು ತರಿಸಿರಿ. ಉಳಿದಂತೆ ಇನ್ನು ಮನೆಗೆ ಹೋಗುವ ಇನ್ನೊಂದು ಹೆಜ್ಜೆ ಉಳಿದುಕೊಂಡಿದೆ. ಈಗಂತೂ ಪ್ರತೀ ಹೆಜ್ಜೆಯಲ್ಲಿ ಪದಮಾಪತಿ ಆಗಿದ್ದೀರಿ. ವರದಾತ ತಂದೆಯ ಮೂಲಕ ಎಷ್ಟು ವರದಾನವು ಪ್ರಾಪ್ತಿಯಾಗಿದೆ! ಯಾವಾಗ ಪ್ರತೀ ಹೆಜ್ಜೆಯಲ್ಲಿ ಪದಮಾಪತಿಯಾಗಿದ್ದೀರಿ ಅಂದಮೇಲೆ ಹೆಜ್ಜೆಯು ವ್ಯರ್ಥವಾಗಿ ಹೋಗುವುದೇ? ಪ್ರತೀ ಹೆಜ್ಜೆಯಲ್ಲಿ ಸಾಮರ್ಥ್ಯವಿದೆ, ವ್ಯರ್ಥವಲ್ಲ. ಸ್ಮೃತಿಯಲ್ಲಿ ಸಾಮರ್ಥ್ಯವನ್ನು ತುಂಬಿರಿ. ಸಾಧಾರಣತೆಯನ್ನು

ಸಮಾಪ್ತಿ ಮಾಡಿಕೊಳ್ಳಿರಿ. ಸ್ಮೃತಿಯಲ್ಲಿ ಸಾಮರ್ಥ್ಯವನ್ನು ತರುತ್ತಾ ಪ್ರತೀ ಹೆಜ್ಜೆಯಲ್ಲಿ ಪದುಮದಷ್ಟನ್ನು ತರುತ್ತಾ ಹೋಗಿ ಆಗ ವಿಶ್ವದ ಮಾಲೀಕರಾಗುವಿರಿ. ಒಳ್ಳೆಯದು.

ಇಂದು ವಿಶೇಷ ಹೂಗುಚ್ಛಕ್ಕಾಗಿ ಸ್ನೇಹಕ್ಕೆ ಆಕರ್ಷಿತರಾಗಿ ಬಂದಿದ್ದೇವೆ. ಕಿರಿಯರೊಂದಿಗೆ ಸದಾ ಅತಿ ಸ್ನೇಹವಿರುತ್ತದೆ. ಆದ್ದರಿಂದ ತಮ್ಮನ್ನು ಅತಿಅನನ್ಯರೆಂದು ತಿಳಿದುಕೊಂಡು ಅತಿಮುದ್ದಾದ ಮಕ್ಕಳಾಗಿದ್ದೀರಿ, ಈಗ ತಂದೆಯ ಸಮಾನರಾಗಿ ತೋರಿಸಿ. ಸಹೋದರ-ಸಹೋದರಿಯರ ಸಮಾನ ಆಗಬಾರದು, ತಂದೆಯ ಸಮಾನರಾಗಬೇಕು. ಯಾವ ಸ್ನೇಹದಿಂದ ಕರೆಸಿದ್ದೀರೋ ಅದೇ ಸ್ನೇಹ ದಿಂದ ತಂದೆಯು ವಾರ್ತಾಲಾಪವನ್ನು ಮತ್ತು ನಮಸ್ತೆಯೂ ಮಾಡುತ್ತಾರೆ.

ಸಾಜ್ (ಶಬ್ದ) ಇಲ್ಲದೆ ರಾಜ್‌ಅನ್ನು (ರಹಸ್ಯ) ತಿಳಿದುಕೊಳ್ಳಬಲ್ಲಿರಾ? ಇಂತಹ ಅಭ್ಯಾಸಿಗಳಾಗಿದ್ದೀರಾ - ಯಾವ ರಹಸ್ಯವು ತಮ್ಮ ಮನಸ್ಸಿ ನಲ್ಲಿದೆಯೋ ಆ ರಹಸ್ಯವನ್ನು ಅನ್ಯರಿಗೆ ಬಾಯಿಂದ ಹೇಳದೆಯೇ ತಿಳಿಸಬಲ್ಲಿರಾ? ಅಂತಿಮದ ಸೇವೆಯಲ್ಲಂತೂ ವಾಚಾ ಸೇವೆಯು ನಿಂತು ಹೋಗುವುದು. ರಹಸ್ಯವನ್ನೇ ತಿಳಿಸಬೇಕಾಗುವುದು ಆದ್ದರಿಂದ ಈಗ ಅಭ್ಯಾಸ ಮಾಡಬೇಕು. ಹೇಗೆ ವಿಜ್ಞಾನವು ಬಹಳಷ್ಟು ಮಾಡಿ ತೋರಿಸುತ್ತಿದೆ ಅಂದಮೇಲೆ ಶಾಂತಿಯಲ್ಲಿ ಆ ಶಕ್ತಿಯಿಲ್ಲವೇ? ಎಷ್ಟೆಷ್ಟು ಸ್ವಯಂ ರಾಜಯುಕ್ತ, ಯೋಗಯುಕ್ತರಾಗುತ್ತಾ ಹೋಗುತ್ತೀರೋ ಅಷ್ಟಷ್ಟು ಅನ್ಯರನ್ನು ವಾಚಾದಿಂದ ಹೇಳದೆ ರಹಸ್ಯಯುಕ್ತರನ್ನಾಗಿ ಮಾಡಬಲ್ಲಿರಿ. ಇಷ್ಟೆಲ್ಲಾ ಪ್ರಜೆಗಳನ್ನು ಹೇಗೆ ತಯಾರು ಮಾಡಬಲ್ಲಿರಿ? ಇದೇ ತೀವ್ರಗತಿಯಿಂದ ಇಷ್ಟು ಪ್ರಜೆಗಳು ತಯಾರಾಗುವರು. ಅಂತಿಮದ ಪ್ರಜೆಗಳ ಮೇಲೂ ಸಹ ಇಷ್ಟೇ ಪರಿಶ್ರಮವೇನು ಪಡುವುದಿಲ್ಲ. ಹೇಗೆ ಸೀಲ್ ತಯಾರಾದಮೇಲೆ ಒಂದುಸೆಕೆಂಡಿನಲ್ಲಿ ಮುದ್ರೆ ಒತ್ತುತ್ತಾ ಹೋಗುತ್ತಾರೆ. ಹಾಗೆಯೇ ಒಂದು ಸೆಕೆಂಡಿನ ಫವರ್‌ಫುಲ್ ಸ್ಥಿತಿಯಿಂದ ಬಾಯಿಂದ ಹೇಳದೆಯೇ ಶ್ರಮವಿಲ್ಲದೆಯೇ ದೈವೀ ಮನೆತನದ ಆತ್ಮರಿಗೆ ಮುದ್ರೆ ಒತ್ತುತ್ತಾ ಹೋಗುವಿರಿ. ಇದೇ ಸರ್ವಶಕ್ತಿವಂತರ ಗಾಯನವಾಗಿದೆ. ವರದಾನಿಗಳೇ ಒಂದುಸೆಕೆಂಡಿನಲ್ಲಿ ಭಕ್ತರಿಗೆ ವರದಾನ ನೀಡಿ, ವರದಾನ ಕೊಡುವುದರಲ್ಲಿ ಪರಿಶ್ರಮ ವಾಗುವುದಿಲ್ಲ. ಆಸ್ತಿಯನ್ನು ಪಡೆಯುವುದರಲ್ಲಿ ಪರಿಶ್ರಮವಿದೆ. ಆಸ್ತಿಯನ್ನು ಪಡೆಯುವವರು ಶ್ರಮಪಡುತ್ತಿದ್ದಾರೆ. ಶ್ರಮದಿಂದ ತಿಳಿದುಕೊಳ್ಳುತ್ತಿದ್ದಾರೆ ಆದರೆ ವರದಾನಿ ಮೂರ್ತಿಗಳಾಗಿಬಿಟ್ಟಾಗ ತೆಗೆದುಕೊಳ್ಳುವವರೂ ಶ್ರಮದಿಂದ ತೆಗೆದುಕೊಳ್ಳುವುದಿಲ್ಲ, ಕೊಡುವವರೂ ಶ್ರಮಪಡುವುದಿಲ್ಲ ಆದ್ದರಿಂದ ನಿಮ್ಮ ಅಂತಿಮ ಸ್ಥಿತಿಯಾಗಿದೆ ವರದಾನಿಮೂರ್ತಿ. ಹೇಗೆ ಲಕ್ಷ್ಮಿಯ ಹಸ್ತಗಳಿಂದ ಸ್ಥೂಲಧನವನ್ನು ನೀಡುತ್ತಿರುವಂತೆ ತೋರಿಸುತ್ತಾರೆ. ಇದು ನಿಮ್ಮ ಅಂತಿಮ ಶಕ್ತಿಯ ರೂಪವಾಗಿದೆ. ಲಕ್ಷ್ಮಿಯದಲ್ಲ. ಶಕ್ತಿರೂಪದಿಂದ ಸರ್ವಶಕ್ತಿವಂತನ ವರದಾನವನ್ನು ನೀಡುತ್ತಿರುವುದರ ಚಿತ್ರವಾಗಿದೆ. ಇದನ್ನು ಸ್ಥೂಲಧನದ ರೂಪದಲ್ಲಿ ತೋರಿಸಿದ್ದಾರೆ. ಅಂದಮೇಲೆ ಇಂತಹ ತಮ್ಮ ಸದಾ ವರದಾನಿ ಸ್ವರೂಪವು ತಮಗೆ ಸಾಕ್ಷಾತ್ಕಾರವಾಗುತ್ತದೆಯೇ? ಇದರಿಂದಲೇ ಸಮಯದ ಬಗ್ಗೆ ತಿಳಿದುಕೊಳ್ಳಬಲ್ಲಿರಿ. ವರದಾನಿಮೂರ್ತಿ ಶಕ್ತಿಯರ ಮುಂದೆ ಎಲ್ಲರೂ ಬರುವರು, ಆಗ ವರದಾನದ ಬೀಜ ಬಿತ್ತಲ್ಪಡುವುದು ಆದ್ದರಿಂದ ತಮ್ಮಲ್ಲಿ ಸರ್ವಶಕ್ತಿಗಳನ್ನು ಜಮಾ ಮಾಡಿಕೊಳ್ಳಬೇಕಾಗಿದೆ. ಈ ರೀತಿ ವರದಾನಿ ಮೂರ್ತಿಗಳಾಗುತ್ತಾ, ಅನ್ಯರನ್ನು ಮಾಡುತ್ತಾ ಹೋಗಿ, ಈಗ ಶಬ್ದದಿಂದ ದೂರ ಹೋಗಬೇಕಾಗಿದೆ. ಒಳ್ಳೆಯದು.

ಅವ್ಯಕ್ತ ಮುರಳಿ 01-12-1971.

***ಸರ್ವ ಶಕ್ತಿಗಳ ಸಂಪತ್ತಿವಂತರಾಗಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತೀವ್ರ ಪುರುಷಾರ್ಥವನ್ನು ಮಾಡಿ ತಂದೆಯಿಂದ ಎಲ್ಲಾ ವರದಾನಗಳನ್ನು ಪಡೆದಿದ್ದೇನೆ.

2. ನಾನು ಸರ್ವ ಶಕ್ತಿವಂತನಾದ ತಂದೆಯನ್ನು ಸಹಯೋಗಿಯನ್ನಾಗಿಸಿಕೊಂಡು ಹೈಜಂಪ್ ಮಾಡಿದ್ದೇನೆ.

3. ನಾನು ತಂದೆಗೆ ತಕ್ಕ ಯೋಗ್ಯ ಸಹಯೋಗಿಯಾಗಿ, ಸಹಯೋಗಿಯಿಂದ ಸಹಜ ಯೋಗಿಯಾಗಿ ಯೋಗಯುಕ್ತ ಸ್ಥಿತಿಯಲ್ಲಿ ಇದ್ದೇನೆ.

4. ನಾನು ನನ್ನ ರಾಜ್ಯಸ್ಥಾಪನೆಯ ಕಾರ್ಯದಲ್ಲಿ ನನ್ನ ಪ್ರತಿ ಮಾತು, ಕರ್ಮವನ್ನು ಸದಾ ಸಹಯೋಗಿಯಾಗಿಸಿಕೊಂಡಿರುವ ನಿರಂತರ ಯೋಗಿ, ಜ್ಞಾನಿ ಮತ್ತು ಸತ್ಯವಾದ ಸೇವಾಧಾರಿ.

5. ನಾನು ತಂದೆಗೆ ಸಮಾನವಾದ ಬುದ್ಧಿ, ವಾಚಾ ಮತ್ತು ಕರ್ಮಣಾದಿಂದ ಸಹಯೋಗಿಯಾಗಿರುವ ನಿರಂತರ ಯೋಗಿ.

6. ನಾನು ಎಲ್ಲರಿಗೂ ಸಾಮರ್ಥ್ಯ ಮತ್ತು ಧೈರ್ಯವನ್ನು ಕೊಟ್ಟು ಪ್ರಾಪ್ತಿಯನ್ನು ಅನುಭವ ಮಾಡಿಸಿ ನನ್ನ ಭಾಗ್ಯವನ್ನು ಪಡೆದಿದ್ದೇನೆ.

7. ನಾನು ನಿರಂತರ ಸಹಜ ಯೋಗಿಯಾಗಿರುವ ಸಹಜಸಿದ್ಧ ಸ್ವಭಾವವನ್ನು ತಯಾರು ಮಾಡಿಕೊಂಡಿರುವ ಪರಿಪಕ್ವ ಸ್ವರೂಪ.

8. ನಾನು ಲೋಪಗಳಿಂದ, ಪ್ರಭಾವಗಳಿಂದ ಅತೀತವಾಗಿರುವ ಪರಿಪಕ್ವ ಸ್ವರೂಪ.

9. ನಾನು ಸಮರ್ಥತೆಯ ಸ್ಮೃತಿಯಿಂದ ಪ್ರತಿ ಹೆಜ್ಜೆಯಲ್ಲಿ ಪದಮಾ ಪದಂ ಸಂಪಾದನೆ ಮಾಡಿಕೊಂಡಿರುವ ವಿಶ್ವ ಯಜಮಾನಿ.